ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ 1999-2000ನೇ ಸಾಲಿನಿಂದ ಈವರೆಗೆ ಎಷ್ಟು ಹೊಸ ಅಂಗನವಾಡಿ ಕಟ್ಟಡಗಳನ್ನು ಕಟ್ಟಲಾಗಿದೆ ; ಇವುಗಳಿಗೆ ಮಂಜೂರಾದ ಹಣವೆಷ್ಟು ; ಎಷ್ಟು ಹಣ ಖರ್ಚು ಮಾಡಲಾಗಿದೆ.

ಆ) ಹಲವಾರು ಅಂಗನವಾಡಿ ಕೇಂದ್ರಗಳಿಗೆ ನಿಗಧಿತ ಸಂಖ್ಯೆಯ ಮಕ್ಕಳು ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಂತಹ ಕೇಂದ್ರಗಳು ಯಾವುವು ?

ಇ) ಇದಕ್ಕೆ ಕಾರಣಗಳೇನು ? ಇದರಿಂದ ಲಕ್ಷಾಂತರ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿಲ್ಲವೆ :

ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ 1999-2000ನೇ ಸಾಲಿನಿಂದ ಈವರೆಗೆ 13 ಹೊಸ ಅಂಗನವಾಡಿ ಕಟ್ಟಡಗಳನ್ನು ಕಟ್ಟಲಾಗಿದೆ ; ಇವುಗಳಿಗೆ ಮಂಜೂರಾದ ಮೊತ್ತ ರೂ. 11.00 ಲಕ್ಷಗಳು ಹಾಗೂ ರೂ. 10.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಹಲವಾರು ಅಂಗನವಾಡಿ ಕೇಂದ್ರಗಳಿಗೆ ನಿಗಧಿತ ಸಂಖ್ಯೆಯ ಮಕ್ಕಳು ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಹಾಸನ ಜಿಲ್ಲೆಯ ಯಗಚಿ ನೀರಾವರಿ ಯೋಜನೆ

130 (190) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಕಾರ್ಯಗತವಾಗುತ್ತಿರುವ ಯಗಚಿ ಯೋಜನೆ ನಿರ್ಮಾಣಕ್ಕೆ ಈ ತನಕ ಎಷ್ಟು ಹಣ ಖರ್ಚಾಗಿದೆ ; ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗಬಹುದು ವಿವರ ತಿಳಿಸುವುದು ;

ಆ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗೆ ನೀರು ಲಭ್ಯವಾಗುತ್ತದೆ.

ಇ) ಹಾಸನ ವಿಧಾನ ಸಭಾ ಕ್ಷೇತ್ರದ ಕಸಬಾ, ಕಟ್ಟಾಯ, ಶಾಂತಿಗ್ರಾಮ ಹೋಬಳಿಗಳ ಎಷ್ಟು ಎಕರೆ ಪ್ರದೇಶಗಳಿಗೆ ನೀರನ್ನು ಒದಗಿಸಲು ಯೋಜಿಸಲಾಗಿದೆ, ವಿವರ ನೀಡುವುದು ?

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :

ಅ) ಯಗಚಿ ಯೋಜನೆ ನಿರ್ಮಾಣಕ್ಕೆ 6/2002 ರ ತನಕ ರೂ. 143.00 ಕೋಟಿ ಖರ್ಚಾಗಿರುತ್ತದೆ ಹಾಗೂ ಯೋಜನೆಯನ್ನು ಪೂರ್ಣಗೊಳಿಸಲು ರೂ. 108.00 ಕೋಟಿ ಬೇಕಾಗುತ್ತದೆ. ವಿವರಗಳು ಈ ಕೆಳಗಿನಂತಿವೆ :-

	ಕೋಟಿ ರೂ. ಗಳಲ್ಲಿ
1. ಅಣೆಕಟ್ಟು ಹಾಗೂ ಸಂಬಂಧಿಸಿದ ಕಾಮಗಾರಿಗಳು	2.00
2. ಪುನರ್ವಸತಿ	5.00
3. ಭೂಸ್ವಾಧೀನ	10.00
4. ಕಾಲುವೆ ಮತ್ತು ಶಾಖೆಗಳು	59.00

5.	ವಿತರಣಾ ನಾಲೆ	15.00
6.	ಕರಗಡ ಏತ ನೀರಾವರಿ ಯೋಜನೆ	2.00
7.	ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ	15.00
	ಒಟ್ಟು	108.00

ಅ) ಈ ಯೋಜನೆಯಿಂದ 4.75 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 37,000 ಎಕರೆ ಅಥವಾ 14,974 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲಾಗುತ್ತದೆ.

By utilising 4.75 TMC of water, 37,000 acres or 14,974 Ha of land will be irrigated.

ಇ) ಹಾಸನ ವಿಧಾನ ಸಭಾ ಕ್ಷೇತ್ರದ ಈ ಕೆಳಕಂಡ ಹೋಬಳಿಗಳಿಗೆ ಯಗಚಿ ಯೋಜನೆಯಿಂದ ನೀರನ್ನು ಒದಗಿಸಲು ಉದ್ದೇಶಿಸಿದೆ :-

ಕಸಬಾ ಹೋಬಳಿ : 5,200 ಎಕರೆಗಳು
ಕಟ್ಟಾಯ ಹೋಬಳಿ : 15,250 ಎಕರೆಗಳು
ಶಾಂತಿ ಗ್ರಾಮ : 7,470 ಎಕರೆಗಳು
ಒಟ್ಟು : 27,920 ಎಕರೆಗಳು

ಬಿ.ಜಿ.ಎಂ.ಎಲ್ ನೌಕರರಿಗೆ ಹಳದಿ ಪಡಿತರ ಚೀಟಿಗಳು

131 (891) ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿ.ಜಿ.ಎಂ.ಎಲ್. ಸಂಸ್ಥೆಯನ್ನು ಮುಚ್ಚಿರುವ ಕಾರಣದಿಂದ 4000 ನೌಕರರು ಯಾವುದೇ ಆದಾಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಸರ್ಕಾರವು ರಚಿಸಿದ ಅಧ್ಯಯನ ತಂಡವು ಬಿ.ಜಿ.ಎಂ.ಎಲ್. ನೌಕರರಿಗೆ ಹಳದಿ ಪಡಿತರ ಚೀಟಿಯನ್ನು ವಿತರಿಸಲು ಶಿಫಾರಸ್ಸು ಮಾಡಿರುವುದೇ ;

ಇ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು ;

ಈ) ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) ಬಿ.ಜಿ.ಎಂ.ಎಲ್. ಸಂಸ್ಥೆಯು ಮುಚ್ಚಲ್ಪಟ್ಟಿರುವುದರಿಂದ ಅದರ ನೌಕರರಿಗೆ ಸಂಬಳವು ಪಾವತಿಯಾಗುತ್ತಿಲ್ಲ ಎಂದು ತಿಳಿದು ಬಂದಿದೆ.

ಆ) ಅಧ್ಯಯನ ತಂಡವು ಸಹಾಯಧನಯುಕ್ತ ಆಹಾರಧಾನ್ಯಗಳನ್ನು ಕೆಲಸವನ್ನು ಕಳೆದುಕೊಂಡ ನೌಕರರಿಗೆ ಒದಗಿಸಬೇಕೆಂದು ಶಿಫಾರಸ್ಸು ಮಾಡಿದೆ.

ಇ) ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ನ್ಯಾಯಬೆಲೆ ಅಂಗಡಿಯೊಂದನ್ನು ನೌಕರರ ಕಾಲೋನಿಯಲ್ಲಿ ತೆರೆದು, ಬಿಜಿಎಂಎಲ್ ಸಂಸ್ಥೆಯು ನೀಡಿದ್ದ ಪಡಿತರ ಚೀಟಿಯ ಆಧಾರದ ಮೇಲೆ ಆಹಾರಧಾನ್ಯಗಳನ್ನು ಒದಗಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳು ಸಮೀಕ್ಷೆ ನಡೆಸಿ 1647 ಕುಟುಂಬಗಳನ್ನು ಸಹಾಯಧನಯುಕ್ತ ಆಹಾರಧಾನ್ಯಗಳ ಹಂಚಿಕೆಗೆ ಗುರುತಿಸಿರುತ್ತಾರೆ. ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.